ಅವನಿನ್ನೂ ಆ ಕಸದ ತೊಟ್ಟಿಯನ್ನು ದಾಟಿರಲಿಲ್ಲ. ಅಷ್ಟರಲ್ಲಿ ಎದುರಿನ ಮಹಡಿ ಮನೆಯ ಬಾಗಿಲು ತೆರೆಯಿತು. ಒಳಗಿನಿಂದ ಗೃಹಿಣಿಯೊಬ್ಬಳು ಸರಸರ ಹೊರಬಂದು, ಗೇಟು ತೆರೆದು ರಸ್ತೆಗೆ ಇಳಿದವಳೇ ಆ ಕಡೆಯಿಂದಲೇ ಮೂತಿ ಕಟ್ಟಿದ ಪ್ಲಾಸ್ಟಿಕ್ ಬ್ಯಾಗೊಂದನ್ನು ರಸ್ತೆಗೆ ಅಡ್ಡವಾಗಿ ಬೀಸಿ ಆ ತೊಟ್ಟಿಯತ್ತ ಒಗೆದಳು. ಅದು ಹೋಗಿ ಕಸದ ಬಳಿ ಇದ್ದ ಒಂದು ನಾಯಿಯ ಮೈ ಮೇಲೆ ಬಿದ್ದಿರಬೇಕು. ಅದು ಒಮ್ಮೆ ಬೌ ಎಂದಿತು. ದನ ಹೊಸದಾಗಿ ಬಿದ್ದ ಕಸದಲ್ಲಿ ತನಗೇನಾದರೂ ಆಹಾರ ಸಿಗಬಹುದೆಂದು ಅದಕ್ಕೆ ಬಾಯಿ ಹಾಕಿತು. ಎರಡಕ್ಕೂ ಜಗಳ ಆರಂಭವಾಯಿತು. ಅವನು ತಲೆ ತಿರುಗಿಸಿ ಆ ಗೃಹಿಣಿಯನ್ನು ನೋಡಿದ. ಅವಳು ಬ್ಯಾಗ್ ಬಿಸಾಡಿದವಳೇ ಬಂದಷ್ಟೇ ತರಾತುರಿಯಿಂದ ಮತ್ತೆ ತನ್ನ ಕಾಂಪೌಂಡ್ ಪ್ರವೇಶಿಸಿ, ಗೇಟ್ ಹಾಕಿ, ಮನೆಯೊಳಗೆ ಕಾಲಿಟ್ಟು ಬಾಗಿಲು ಮುಚ್ಚಿಕೊಂಡಳು.

ನಮ್ಮ ಜನರು ಹೀಗೆ ಯಾಕೆ ಮಾಡುತ್ತಾರೆ ಎಂದವನು ಯೋಚಿಸಿದ. ಕಸವನ್ನು ತಮ್ಮ ಮನೆಯಿಂದ ಹೊರಗೆ ಹಾಕಿದರಷ್ಟೇ ಸಾಕೇ? ತಮ್ಮ ಸುತ್ತು ಮುತ್ತಲ ವಾತಾವರಣವನ್ನೂ ಸ್ವಚ್ಛವಾಗಿಡುವ ಅಗತ್ಯವಿಲ್ಲವೇ? ಸಾರ್ವಜನಿಕ ರಸ್ತೆ ಎಂದರೆ ಕಸದ ತೊಟ್ಟಿಯೇ? ಆ ಗೃಹಿಣಿಗೆ ಅಷ್ಟೂ ತಿಳಿಯುವುದಿಲ್ಲವೇ? ದೊಡ್ಡ ಮನೆ ಕಟ್ಟಿದ್ದಾರೆ. ಆದರೆ ಮನಸ್ಸು ಇಷ್ಟು ಸಣ್ಣದೇ? ಹೋಗಿ ಬಾಗಿಲು ತಟ್ಟಿ ನೀವು ಮಾಡಿದ್ದು ಸರಿಯೇ ಎಂದು ಕೇಳಬೇಕು ಎಂಬ ಇಚ್ಛೆ ಮೂಡಿತ್ತಾದರೂ ಅವನು ಮುಂದೆ ಹೋದ.

ಆ ಗುಂಗಿನಲ್ಲಿಯೇ ಮುಂದಕ್ಕೆ ಹೋದಾಗ ಪ್ಯಾಂಟು ಶರಟು ಧರಿಸಿದ, ಸಾಕಷ್ಟು ವಿದ್ಯಾವಂತನಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬ ರಸ್ತೆಯ ಬದಿ ತನ್ನ ಮೋಟಾರು ಬೈಕನ್ನು ನಿಲ್ಲಿಸಿ, ಕಾಂಪೌಂಡ್ ಗೋಡೆಯತ್ತ ಮುಖ ಮಾಡಿ ಉಚ್ಚೆ ಹೊಯ್ಯುತ್ತಿದ್ದ. ಹೀಗೆ ಮಾಡುವುದು ಸರಿಯಲ್ಲ ಎಂದು ಅವನಿಗೆ ಹೇಳಲೇ ಬೇಕೆಂಬ ತುಡಿತ ಅವನಲ್ಲಿ ಜೋರಾಯಿತು. ಮೂತ್ರಶಂಕೆ ದೀರ್ಘವಾಗಿಯೇ ಇತ್ತು. ಕಾಂಪೌಂಡ್ ಗೋಡೆಯಿಂದ ಇಳಿದು, ಫುಟ್‌ಪಾತಿನ ಮೇಲೆ ಹರಿದು ರಸ್ತೆಗೆ ಇಳಿದಿತ್ತು. ಅವನ ಕೆಲಸವಾಗುವವರೆಗೂ ಕಾಯುತ್ತಾ ನಿಂತ.

'ಮಿ, ಈ ರೀತಿ ರಸ್ತೆ ಬದಿಯಲ್ಲಿ ಉಚ್ಚೆ ಹೊಯ್ಯೋದು ಸರಿಯಂತ ಕಾಣಿಸುತ್ತದೆಯೇ ನಿಮಗೆ? ನಿಮ್ಮನ್ನು ನೋಡಿದರೆ ವಿದ್ಯಾವಂತರಂತೆ ಕಾಣುತ್ತೀರಿ!' ಪ್ಯಾಂಟಿನ ಜಿಪ್ ಹಾಕುತ್ತಾ ಬೈಕಿನ ಕಡೆಗೆ ನಡೆಯುತ್ತಿದ್ದವನನ್ನು ನಿಲ್ಲಿಸಿ ಅವನು ಹೇಳಿದ. ಅಕಸ್ಮಾತ್ತಾಗಿ ಮಾತನಾಡಿಸಿದ ಈ ಅನಾಮಿಕ ವ್ಯಕ್ತಿಯ ಮಾತುಗಳಿಂದ ಅವನು ದಂಗಾಗಿರಬೇಕು. ಒಂದು ಕ್ಷಣ ಆತ ಅವನನ್ನೇ ದಿಟ್ಟಿಸಿ ನೋಡಿದ. ಆ ಮೇಲೆ, 'ಈ ರಸ್ತೆ ನಿಮ್ಮಪ್ಪಂದೇ? ಹೋಗ್ರೀ, ಹೋಗ್ರೀ ನಿಂ ಕೆಲಸ ನೋಡ್ಕಳ್ರೀ' ಎಂದು ಹೇಳಿ ಅವನು ಬೈಕ್ ಹತ್ತಿ ಹೊರಟು ಹೋದ. ಅವನ ಬಾಯಿ ಮುಚ್ಚಿ ಹೋಯಿತು.

ಅವನು ಮುಂದೆ ನಡೆಯುವಾಗಲೂ ಆ ವ್ಯಕ್ತಿಯ ಮಾರುತ್ತರ ಅವನ ಮನಸ್ಸಿನಲ್ಲಿ ಮತ್ತೆ ಮತ್ತೆ ಧ್ವನಿಸುತ್ತಿತ್ತು. ಹೌದಲ್ಲ, ಈ ರಸ್ತೆ ನನ್ನ ಅಪ್ಪನದ್ದೇ? ನನಗೆ ಯಾಕೆ ಬೇಕಿತ್ತು ಅವನನ್ನು ಮಾತನಾಡಿಸುವ ಕೆಲಸ? ನನ್ನಷ್ಟಕ್ಕೆ ನಾನು ಅವನ ಉಚ್ಚೆಯ ಮೇಲೆ ಕಾಲಿಡದ ಹಾಗೆ ಎಚ್ಚರ ವಹಿಸಿ ಮುಂದಕ್ಕೆ ಹೋಗಬಹುದಿತ್ತಲ್ಲ? ಎಷ್ಟೋ ಜನರು ರಸ್ತೆಯ ಮೇಲೆ ಉಗುಳುತ್ತಾರೆ. ತಾವು ಸಾಕಿದ ನಾಯಿಗಳನ್ನು ಕರೆತಂದು ಅವುಗಳ ಪ್ರಾಕೃತಿಕ ಕರೆಗಳನ್ನು ಮಾಡಿಸಿ ಹೋಗುತ್ತಾರೆ. ಎಲ್ಲವನ್ನೂ ಸರಿಗೊಳಿಸುವುದು ನನಗೆ ಇರುವ ಕೆಲಸವೇ? ಇದರ ನಡುವೆ ಇನ್ನೊಂದು ಯೋಚನೆಯೂ ಅವನನ್ನು ಚುಚ್ಚಿತು. ಆ ವ್ಯಕ್ತಿಗೆ ಹೇಳುವ ನೈತಿಕತೆಯಾದರೂ